# ನೇಮಕಾತಿ ಪ್ರಾಧಿಕಾರ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.

## ಅಭ್ಯರ್ಥಿಗಳ ಮಾಹಿತಿಗಾಗಿ

ಸಂಖ್ಯೆ: ಸಿಬ್ಬಂದಿ.ನೇಮಕ.164/2011

ದಿನಾಂಕ: 23-11-2012.

ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ 1834 ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ.ನೇಮಕ.164/2011 ದಿನಾಂಕ: 25-6-2011 ರಂತೆ ಈ ಕೆಳಕಂಡ ಮಾಹಿತಿಯನ್ನು ಎಲ್ಲರ ಗಮನಕ್ಕಾಗಿ ನೀಡಿದೆ.

1) ಅಧಿಸೂಚನೆಯಲ್ಲಿ ಹೊರಡಿಸಲಾದ 1834 ಹುದ್ದೆಗಳ ಪೈಕಿ 1791 ಹುದ್ದೆಗಳಿಗೆ ಮಾತ್ರ ಆಯ್ಕೆಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿದೆ.
2) 1834 ಹುದ್ದೆಗಳ ಪೈಕಿ ರೋಸ್ಟರ್ ಪ್ರಕಾರ ಪ್ರತಿಶತ 5% ರಷ್ಟು ಹುದ್ದೆಗಳನ್ನು ಅಂದರೆ 98 ಹುದ್ದೆಗಳನ್ನು ವಿವಿಧ ಸಮತಲ ಮೀಸಲಾತಿಯಂತೆ (ಎ) ವಾಸಿಯಾದ ಕುಷ್ಟರೋಗ / ಬುದ್ಧಿಮಾಂದ್ಯತೆ (ಬಿ) ಶ್ರವಣದೋಷ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದ್ದು, ಅದರಂತೆ ಅಧಿಸೂಚನೆಯಲ್ಲಿ ಈ ಗುಂಪಿನ ಅಂಗವಿಕಲತೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿತ್ತು. ಸರ್ಕಾರದ ಅಧಿಸೂಚನೆ ಸಂ: ಡಿಪಿಎಆರ್.179 ಎಸ್‌ಆರ್‌ಆರ್.2012 ದಿನಾಂಕ: 9-10-2012 ರಲ್ಲಿ ವಿವರಿಸಿರುವಂತೆ ಕೇಂದ್ರಸರ್ಕಾರದ ಅಧಿಸೂಚನೆ ಸಂಖ್ಯೆ: 16-70/2004-DD III ದಿನಾಂಕ: 15-3-2007 ರಲ್ಲಿನ ಮೀಸಲಾತಿಯನ್ನು ಯಥಾವತ್ತಾಗಿ ರಾಜ್ಯಸರ್ಕಾರದ ಹುದ್ದೆಗಳಿಗೂ ಅನ್ವಯಿಸಿರುವುದರಿಂದ ಈ ಆದೇಶದ ಪಟ್ಟಿಯಲ್ಲಿ ಭೂಮಾಪಕರ ಹುದ್ದೆಗಳಿಗೆ ಚಲನ-ವಲನ ಅಂಗವೈಕಲ್ಯತೆ ಇರುವವರೆಗೂ ಮೀಸಲಾತಿ ನೀಡಲು ಅವಕಾಶ ಕಲ್ಪಿಸಿರುತ್ತದೆ. ಆ ಪ್ರಕಾರ 98 ಹುದ್ದೆಗಳ ಪೈಕಿ (ಎ) ವಾಸಿಯಾದ ಕುಷ್ಟರೋಗ / ಬುದ್ಧಿಮಾಂದ್ಯತೆ ಅಭ್ಯರ್ಥಿಗಳು – 32 ಹುದ್ದೆಗಳು (ಬಿ) ಶ್ರವಣದೋಷ ಅಂಗವೈಕಲ್ಯ ಅಭ್ಯರ್ಥಿಗಳು – 33 ಹುದ್ದೆಗಳು (ಸಿ) ಚಲನವಲನ ಅಂಗವೈಕಲ್ಯ ಅಭ್ಯರ್ಥಿಗಳು – 33 ಹುದ್ದೆಗಳನ್ನು ಮೀಸಲಿರಿಸಬೇಕಾಗುತ್ತದೆ. ಈ ಪೈಕಿ (ಬಿ) ಶ್ರವಣದೋಷ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳನ್ನು 33 ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. (ಎ) ವಾಸಿಯಾದ ಕುಷ್ಟರೋಗ / ಬುದ್ಧಿಮಾಂದ್ಯತೆ ಅಭ್ಯರ್ಥಿಗಳ ಮೀಸಲಾತಿ ಪೈಕಿ 22 ಲಭ್ಯವಿದ್ದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕೊರತೆಯಾದ 10 ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗಿದೆ. (ಸಿ) ಚಲನವಲನ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳಿಂದ ಈ ಹಿಂದೆ ಅಂದರೆ ದಿನಾಂಕ: 25-6-2011 ರ ಅಧಿಸೂಚನೆಯಲ್ಲಿ ಅರ್ಜಿ ಆಹ್ವಾನಿಸದೇ ಇರುವುದರಿಂದ ಈ ವೃಂದದ ಅಭ್ಯರ್ಥಿಗಳಿಂದ ಸದರಿ 33 ಹುದ್ದೆಗಳನ್ನು ಭರ್ತಿ ಮಾಡಲು ಪ್ರತ್ಯೇಕ ಪ್ರಕಟಣೆಯನ್ನು ಹೊರಡಿಸಲಾಗುವುದು.
3) ಸಾಮಾನ್ಯ ಜ್ಞಾನ ಪತ್ರಿಕೆ ಹಾಗೂ ವಿಶಿಷ್ಟ ಪತ್ರಿಕೆಗಳ ಎಲ್ಲಾ ಸರಣಿಯ ಅಂತಿಮ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ.
4) ಅಧಿಸೂಚನೆ ಸಂಖ್ಯೆ: ಸಿಬ್ಬಂದಿ.ನೇಮಕ.164/2011 ದಿನಾಂಕ: 25-6-2011 ರನ್ವಯ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಅಭ್ಯರ್ಥಿಗಳು ಸಾಮಾನ್ಯ ಜ್ಞಾನ ಪತ್ರಿಕೆ ಹಾಗೂ ವಿಶಿಷ್ಟ ಪತ್ರಿಕೆಗಳ ಲಿಖಿತ ಪರೀಕ್ಷೆಯಲ್ಲಿ ಪಡೆದಂತಹ ಅಂಕಪಟ್ಟಿಯನ್ನು ಅಭ್ಯರ್ಥಿಯ ಇತರೆ ವಿವರಗಳೊಂದಿಗೆ ಪ್ರಕಟಿಸಲಾಗಿದೆ.
5) ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗಿ ಕನಿಷ್ಟ 50 ಅಂಕಗಳನ್ನು ಪಡೆದಂತಹ ಅಭ್ಯರ್ಥಿಯ ಸಾಮಾನ್ಯ ಜ್ಞಾನ ಪತ್ರಿಕೆ ಹಾಗೂ ವಿಶಿಷ್ಟ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಅವರ ಅರ್ಹತೆಯನ್ನು ಪರಿಗಣಿಸಿ ಪ್ರಕಟಿಸಲಾಗಿದೆ.

6) ಕನ್ನಡ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಂದರೆ 50 ಅಂಕಗಳಿಗಿಂತ ಕಡಿಮೆ ಪಡೆದ ಅಭ್ಯರ್ಥಿಗಳ ವಿವರಗಳನ್ನು ಸಹ ಪ್ರಕಟಿಸಲಾಗಿದೆ. ಹಾಗೂ ಅಂತಹ ಅಭ್ಯರ್ಥಿಗಳನ್ನು ಅನರ್ಹರೆಂದು ಪರಿಗಣಿಸಿ ಸಾಮಾನ್ಯ ಜ್ಞಾನ ಪತ್ರಿಕೆ ಹಾಗೂ ವಿಶಿಷ್ಟ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿರುವುದಿಲ್ಲ.

7) ಭೂಮಾಪಕರ ಹುದ್ದೆಗೆ ಮೀಸಲಾತಿ ಕಲ್ಪಿಸದೇ ಇರುವ ದೃಷ್ಟಿಮಾಂದ್ಯ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾದ ಶ್ರೀ ಕೆ. ಉಬಕುಮಾರ್ ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4220/2011 ರಲ್ಲಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯದ ಸೂಚನೆಯಂತೆ ಸದರಿಯವರಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅನುಮತಿಸಲಾಗಿದೆ. ಆದರೆ ನ್ಯಾಯಾಲಯದಲ್ಲಿ ಅಂತಿಮ ಆದೇಶವಾಗದ ಕಾರಣ ಮಾನ್ಯ ಆಡಳಿತ ನ್ಯಾಯಮಂಡಳಿಯ ಅಂತಿಮ ಆದೇಶವನ್ನು ಕಾಯ್ದಿರಿಸಿ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

8) ಶ್ರೀಮತಿ ಅಕ್ಕಮ್ಮ ಹಳ್ಳೂರು ಮತ್ತು ಶ್ರೀ ಕೃಷ್ಣಮೂರ್ತಿ, ಪರವಾನಗಿ ಭೂಮಾಪಕರು ಇವರುಗಳ ಅರ್ಜಿಯನ್ನು ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾದ "ದುರ್ನಡತೆಯ" ಹಿನ್ನೆಲೆಯಲ್ಲಿ ತಿರಸ್ಕರಿಸಿದ್ದು, ಈ ಆದೇಶದ ವಿರುದ್ಧ ಘನ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: ಡಬ್ಲ್ಯೂಪಿ. 38242/2011 ಮತ್ತು 38509/2011 ರಲ್ಲಿ ಪ್ರಶ್ನಿಸಿದಂತೆ ನೀಡಿರುವ ನಿರ್ದೇಶನದಂತೆ ಸದರಿಯವರ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

9) ಪ್ರತಿಯೊಂದು ಅಡ್ಡ ಮೀಸಲಾತಿ ಹಾಗೂ ಸಮತಲ ಮೀಸಲಾತಿಯಲ್ಲಿನ ಪ್ರತಿಯೊಂದು ವರ್ಗದಲ್ಲಿ ಆಯ್ಕೆಯಾದ ಅಂತಿಮ ಅಭ್ಯರ್ಥಿಯ ಆಯ್ಕೆಯ ಪ್ರತಿಶತ ಅಂಕವನ್ನು ಹಾಗೂ ಪ್ರತಿ ಅಡ್ಡ ಮೀಸಲಾತಿ ಹಾಗೂ ಸಮತಲ ಮೀಸಲಾತಿಯಂತೆ ಪ್ರತಿ ವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆಯನ್ನು ಪ್ರಕಟಿಸಲಾಗಿದೆ.

10) ಭೂಮಾಪಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆಯ ಆಧಾರದ ಮೇಲೆ ಹಾಗೂ ಚಾಲ್ತಿಯಲ್ಲಿರುವ ಸರ್ಕಾರಿ ನಿಯಮಗಳಂತೆ (ಎ) ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳನುಗುಣವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು (ಬಿ) ನೇಮಕಾತಿಗೆ ಪ್ರಕಟಿಸಲಾದ ಹುದ್ದೆಗಳ ಪೈಕಿ 15% ಪ್ರತಿಶತ ಹೆಚ್ಚುವರಿ ಪಟ್ಟಿಯನ್ನು ವಿವಿಧ ಮೀಸಲಾತಿಗನುಗುಣವಾಗಿ ತಯಾರಿಸಿ ಪ್ರಕಟಿಸಲಾಗಿದೆ.

11) ಈಗ ಪ್ರಕಟಿಸಲಿರುವ ತಾತ್ಕಾಲಿಕ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಲಾದ ಅರ್ಜಿ ಸಂಖ್ಯೆ: 651-654/2012, 1716-17/2012, 5811-6110/2011, 483/2012, 6639-6642/2011 ರ ತೀರ್ಪಿಗೆ ಒಳಪಟ್ಟಿರುತ್ತದೆ.

12) ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆ ಸೋರಿರುವಿಕೆ ಬಗ್ಗೆ ದೂರುಗಳಿದ್ದು, ಇದಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಕೈಗೊಳ್ಳಲಾಗುತ್ತಿದ್ದು, ತನಿಖೆಯ ಅಂತಿಮ ವರದಿಯ ಆಧಾರದ ನಿರ್ಧಾರಕ್ಕೆ ಈ ಫಲಿತಾಂಶವು ಒಳಪಟ್ಟಿರುತ್ತದೆ.

ಅಧ್ಯಕ್ಷರು, ನೇಮಕಾತಿ ಪ್ರಾಧಿಕಾರ
ಹಾಗೂ ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.